ಸಾಕ್ಷಿಯನ್ನು ದಿನಾಂಕಃ 23/08/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- 2 ನೇ ಪ್ರತಿವಾದಿ ಪರ ವಕೀಲರಿಂದಃ**

ಕಳೆದ ಬಾರಿ ಪಾಟೀ ಸವಾಲಿನಲ್ಲಿ ನಿಮ್ಮ ಜನ್ಮ ದಿನಾಂಕ 24/03/2001 ಎಂದು ಹೇಳಿದ್ದೀರಿ ಎಂದರೆ ಸರಿ. ಸದರಿ ದಾವೆಯನ್ನು 2022 ರಲ್ಲಿ ದಾಖಲಿಸಿದ್ದೀರಿ ಎಂದರೆ ಸರಿ. 2022 ರಲ್ಲಿ ನಿಮ್ಮ ವಯಸ್ಸು 21 ವರ್ಷ ವಯಸ್ಸು ಇತ್ತು ಎಂದರೆ ಸರಿ.ನಿಮ್ಮ ದಾವೆಯಲ್ಲಿ ನಿಮ್ಮ ವಯಸ್ಸು 25 ಎಂದು ಮತ್ತು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 23 ಎಂದು ಬರೆಸಿದ್ದೇನೆಂದರೆ ಸಾಕ್ಷಿ ನನಗೆ ಅಷ್ಟು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನೀವು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರಾಮಪ್ಪ ನನ್ನ ತಂದೆ ಎಂದು ಹೇಳುತ್ತಿದ್ದೀರಿ ಎಂದರೆ ಸರಿ. 3 ನೇ ಪ್ರತಿವಾದಿ ಗಂಗವ್ವ ನನ್ನ ತಾಯಿ ಎಂದು ಹೇಳುತ್ತಿದ್ದೀರಿ ಎಂದರೆ ಸರಿ. 1 ಮತ್ತು 3 ನೇ ಪ್ರತಿವಾದಿ ಗಂಡ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಮನೆಯಲ್ಲಿ ಸೇರಿಸಿಕೊಳ್ಳಿಲ್ಲ , ಅದಕ್ಕೆ ದಾಖಲೆ ಹಾಜರು ಮಾಡಿಲ್ಲ ಎಂದು ಹೇಳುತ್ತಾರೆ. ನಾನು ಹಾಕಿದ ವಂಶಾವಳಿಯಲ್ಲಿ 2 ನೇ ಪ್ರತಿವಾದಿ ಕುಟುಂಬಕ್ಕೆ ಸೇರಿದವರು ಎಂದು ಬರೆಸಿದ್ದೀರಿ ಎಂದರೆ ಸರಿ. ನನಗೆ ಕನ್ನಡ ಓದಲು ಬರುತ್ತದೆ. ಸಾಕ್ಷಿಗೆ ಒಂದು ಮದುವೆಯ ಆಹ್ವಾನ ಪತ್ರಿಕೆಯನ್ನು ತೋರಿಸಿ ರಾಮಪ್ಪ ರವರ ಮದುವೆ ಮಂಜುಳಾ ರವರ ಜೊತೆ ದಿಃ 19/05/1997 ರಂದು ಆಗಿದೆ ಎಂದು ಕೇಳಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 3 ಆಸ್ತಿಗಳನ್ನು ಸದರಿ ರಾಮಪ್ಪ ರವರು ತಮ್ಮ ಹೆಂಡತಿಯಾದ ಮಂಜುಳಾ ರವರ ಹೆಸರಿಗೆ ಗಿಫ್ಟ ಮಾಡಿ ದಾಖಲೆಯನ್ನು ನೋಂದಣಿ ಮಾಡಿದ್ದಾರೆ ಎಂದರೆ ಸಾಕ್ಷಿ ನಾನು ನನ್ನ ಅಜ್ಜನ ಆಸ್ತಿಯಲ್ಲಿ ಪಾಲು ಕೇಳಲು ಹೋದಾಗ ನಮ್ಮ ತಂದೆಯವರು ನಿಮ್ಮ ಅಜ್ಜನ ಆಸ್ತಿ ಎಲ್ಲಿ ಎಲ್ಲಿ ಇದೆ ಎಂದು ನೋಡಿ ಪಾಲು ತಗೋ ಎಂದು ಹೇಳಿದಕ್ಕೆ ನಾನು ದಾಖಲಾತಿ ತೆಗೆದು ನೋಡಿದಾಗ ಸದರಿ ಗಿಫ್ಟ ನ ವಿಷಯ ಗೊತ್ತಾಗಿ ಈ ಪ್ರಕರಣ ದಾಖಲಿಸಿದ್ದೇನೆಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ನಿಮ್ಮ ತಂದೆ ಕುಡುಕ ಹೆಣ್ಣು ಮಕ್ಕಳನ್ನು ದುರಪಯೋಗ ಮಾಡಿಕೊಳ್ಳುತ್ತಾನೆ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿ. ನಿಮ್ಮ ತಾಯಿಯ ಮದುವೆ ರಾಮಪ್ಪ ರವರ ಜೊತೆ ಯಾವಾಗ ಆಯಿತು ಎಂದು ಕೇಳಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ

ಎಂದು ಹೇಳುತ್ತಾರೆ. ಸಾಕ್ಷಿಗೆ ಮ್ಯೂಟೇಷನ ರಿಜಿಸ್ಟರ ತೋರಿಸಲಾಗಿ ಅದರ ಪ್ರಕಾರ ದಾನ ಕೊಟ್ಟ ನಂತರ ಅವರ ಹೆಸರಿಗೆ ಜಮೀನುಗಳು ಆಗಿವೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ಹಾಕಿರುವ ಆಸ್ತಿಗಳು ಸರಿಯಾಗಿ ಇವೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಹೆಸರಿನಲ್ಲಿ ಕಳೆದ 25 ವರ್ಷಗಳಿಂದ ಅವರ ಹೆಸರಿಗೆ ಇವೆ ಮತ್ತು ಅವರೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಎಂದು ಹೇಳುವಂತವರಿಗೆ ಮಂಜುಳಾ ಇವರ ಜೊತೆ 1997 ರಲ್ಲಿ ಮದುವೆ ಆಗಿದೆ ಸದರಿ ಮಂಜುಳಾ ಅವರೆ ಒಬ್ಬರೇ ಹೆಂಡತಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ಗಂಗವ್ವ ರಾಮಪ್ಪ ರವರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಈ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಅಧಿಕಾರ ಪಾಲು ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿ ಗಂಗಮ್ಮ ರವರಿಗೆ ಎಷ್ಟು ವರ್ಷ ವಯಸ್ಸು ಎಂದು ನನಗೆ ಗೊತ್ತಿಲ್ಲ. ನಿಮ್ಮ ತಾಯಿ ಗಂಗವ್ವ ಅಂದರೆ 3 ನೇ ಪ್ರತಿವಾದಿ 42 ವಯಸ್ಸು ಎಂದು ಬರೆಸಿದ್ದೀರಿ ಎಂದರೆ ಸಾಕ್ಷಿ ಅಂದಾಜು ಎಂದು ಬರೆಸಿದ್ದೇನೆ. ನೀವು ಹುಟ್ಟುವಾಗ ನನ್ನ ತಾಯಿಗೆ 18-19 ವರ್ಷ ವಯಸ್ಸಾಗಿತ್ತು. ಅದರ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವು ರಾಮಪ್ಪ ರವರ ಕಾನೂನುಬದ್ಧ ಮಗಳಲ್ಲ , ನೀವು ಮಂಜುಳಾ ರವರಿಗೆ ಹುಟ್ಟಿದ್ದ ಮಗಳಲ್ಲ, ಆದ್ದರಿಂದ ನಿಮಗೆ ಆಸ್ತಿಯಲ್ಲಿ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ.ದುರುದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.**

**1 ಮತ್ತು 3 ರಿಂದ 5 ನೇ ಪ್ರತಿವಾದಿ ಪರ ವಕೀಲರನ್ನು ನ್ಯಾಯಾಲಯದಲ್ಲಿ ಕೂಗಿ ಕರೆಸಲಾಗಿ ಗೈರು ಹಾಜರು ಆಗಿರುವುದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
23.08.2024
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**